ಕರ್ನಾಟಕ ಸರಕಾರ
(ಕಂದಾಯ ಇಲಾಖೆ)

ಕ್ರ: ಕಂಶಾ/ಸಿಬ್ಬಂದಿ-2/ವಿವ-67/2022-23

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಬೆಳಗಾವಿ, ದಿನಾಂಕ:29/09/2022. 10

ವಿಷಯ :- ಕು. ರುಕ್ಸಾರ ಬಾಬಾಸಾಹೇಬ ಶೇಖ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು.

ಓದಿದೆ :- 1) ಕು. ರುಕ್ಸಾರ ಬಾಬಾಸಾಹೇಬ ಶೇಖ ಇವರ ಅರ್ಜಿ ದಿನಾಂಕ: 14-12-2021.
2) ಪ್ರಾದೇಶಿಕ ಆಯುಕ್ತರು ಬೆಳಗಾವಿ ಇವರ ಅಧಿಕೃತ ಜ್ಞಾಪನ ಕ್ರ: ಸಿಬ್ಬಂದಿ-3(2) ದ್ವಿ.ದ.ಸ: 02/2022-23 ದಿನಾಂಕ: 04-08-2022.
3) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್/100/ಎಸ್‌ಸಿಎ/95/1996 ದಿ: 12-9-1996.
4) ಸರ್ಕಾರದ ಅಧಿಸೂಚನೆ ಕ್ರ: ಸಂ: ಸಿಆಸುಇ:118:ಸೇವಸೆ: 2009 ದಿ: 28-06-2010.
5) ಸರ್ಕಾರದ ಅಧಿಸೂಚನೆ ಸಂ: ಸಿಆಸುಇ/59/ಸೇವನೆ/2012. ದಿನಾಂಕ: 06-08-2012.
6) ಸರ್ಕಾರದ ಅಧಿಸೂಚನೆ ಕ್ರ: ಡಿಪಿಎಆರ್/18/ಎ ಸ್‌ಸಿಆರ್/2013 ದಿನಾಂಕ:13-12-2013.
7) ಸರ್ಕಾರದ ಸುತ್ತೋಲೆ ಸಂಖ್ಯೆ ಸಿಆಸುಇ/18/ಸೇವನೆ/2017. ದಿನಾಂಕ: 27-02-2018.
8) ಸರ್ಕಾರದ ಅಧಿಸೂಚನೆ ಸಂ: ಸಿಆಸುಇ/26/ಸೇಅನೆ/2018. ದಿನಾಂಕ: 09-04-2021.

DEPUTY COMMISSIONER ಜಿಲ್ಲಾ ಕಮೀಶನರ ಬೆಳಗಾವಿ BELAGAVI

*-*-*-*

**ಪ್ರಸ್ತಾವನೆ :**

ದಿ. ಫರೀದಾಬೇಗಂ ಅಮೀರಖಾನ ಇನಾಮದಾರ ಇವರು ಶಿಕ್ಷಣ ಇಲಾಖೆಯಲ್ಲಿ ಸರಕಾರಿ ಸೇವೆ ಸಲ್ಲಿಸುತ್ತಿರುವಾಗ ದಿನಾಂಕ: 20-04-2021 ರಂದು ಮರಣ ಹೊಂದಿರುವರು. ಮೃತ ನೌಕರರ ಮಗಳು ಕು. ರುಕ್ಸಾರ ಬಾಬಾಸಾಹೇಬ ಶೇಖ ಇವರು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಲು ವಿನಂತಿಸಿ ದಿನಾಂಕ 14-12-2021 ರಂದು ಅರ್ಜಿ ಸಲ್ಲಿಸಿದ್ದಾರೆ. ಓದಲಾಗಿದೆ (2) ರಲ್ಲಿ ಪ್ರಾದೇಶಿಕ ಆಯುಕ್ತರು ಬೆಳಗಾವಿ ಇವರು ಪ್ರಸ್ತಾವನೆಯನ್ನು ಪರಿಶೀಲಿಸಿ ಅಭ್ಯರ್ಥಿಯು ಅನುಕಂಪದ ಆಧಾರದ ಮೇಲೆ ಗ್ರೂಪ್ 'ಸಿ' ವೃಂದದ ದ್ವಿ.ದ.ಸ ಹುದ್ದೆಗೆ ಅರ್ಹರಿರುವುದರಿಂದ ನೇಮಕಾತಿ ನೀಡಲು ಹಂಚಿಕೆ ಮಾಡಿ ಪ್ರಸ್ತಾವನೆಯನ್ನು ಈ ಕಾರ್ಯಾಲಯಕ್ಕೆ ಕಳುಹಿಸಿರುತ್ತಾರೆ. ಓದಲಾಗಿದೆ (3) ರಡಿಯಲ್ಲಿ ಕಾಣಿಸಿದ ಸರ್ಕಾರದ ಅಧಿಸೂಚನೆ ಮೇರೆಗೆ ಹಾಗೂ ತದನಂತರದ ತಿದ್ದುಪಡಿ ನಿಯಮಗಳನ್ವಯ ಅಭ್ಯರ್ಥಿಯು ಅನುಕಂಪದ ಆಧಾರದ ಮೇಲೆ 'ಸಿ' ವೃಂದದ ದ್ವಿ.ದ.ಸ ಹುದ್ದೆಗೆ ನೇಮಕಾತಿ ಹೊಂದಲು ಅರ್ಹರಿರುವುದನ್ನು ಪರಿಗಣಿಸಿ ಕಂದಾಯ ಇಲಾಖೆಯ ಬೆಳಗಾವಿ ಘಟಕದ ದ್ವಿ.ದ.ಸ ಹುದ್ದೆಯಲ್ಲಿ ನೇಮಕಾತಿ ಮಾಡುವ ಕುರಿತು ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**: ಆದೇಶ :**

ಪ್ರಸ್ತಾವನೆಯಲ್ಲಿ ವಿವರಿಸಿದ ಎಲ್ಲ ವಿಷಯಗಳನ್ನು ಅವಲೋಕಿಸಿ, ಕು. ರುಕ್ಸಾರ ಬಾಬಾಸಾಹೇಬ ಶೇಖ ಇವರನ್ನು ಗ್ರೂಪ್ 'ಸಿ' ವೃಂದದ ದ್ವಿ.ದ.ಸ ಹುದ್ದೆಯಲ್ಲಿ ಈ ಕೆಳಗೆ ಕಾಣಿಸಿದ ಶರ್ತುಗೊಳಪಟ್ಟು ಬೆಳಗಾವಿ ಜಿಲ್ಲಾ ಕಂದಾಯ ಘಟಕಕ್ಕೆ ನೇರ ನೇಮಕಾತಿ ಮಾಡಿ ತಹಶೀಲ್ದಾರ, ಹುಕ್ಕೇರಿ ಇವರ ಕಾರ್ಯಾಲಯದಲ್ಲಿ ಖಾಲಿ ಇರುವ ದ್ವಿ.ದ.ಸ ಹುದ್ದೆಗೆ ನಿಯುಕ್ತಿಗೊಳಿಸಿ ಈ ಮೂಲಕ ಆದೇಶಿಸಲಾಗಿದೆ.

**ಶರ್ತುಗಳು :**

1) ಸದರಿಯವರು ಸರ್ಕಾರದ ಆದೇಶ ಸಂಖ್ಯೆ: ಆಇ/79/ಟಿಎಆರ್/2006/ದಿನಾಂಕ: 16-06-2007 ರ ಪ್ರಕಾರ ಅಂಶದಾಯಿ ಕೊಡುಗೆ, ವಿಶ್ರಾಂತಿ ವೇತನ ಯೋಜನೆಯನ್ವಯ ಕ್ರಮ ಜರುಗಿಸುವದು.
2) ನೇಮಕಾತಿಯು ತಾತ್ಕಾಲಿಕವಾಗಿದ್ದು, ಸೂಚನಾ ಪತ್ರ ಕೊಡದೇ ಯಾವುದೇ, ಕಾರಣ ನೀಡದೇ ಬೇಕಾದಾಗ ಸೇವೆಯಿಂದ ಕಡಿಮೆಗೊಳಿಸುವ ಕರಾರುಗಳಿಗೆ ಒಳಪಟ್ಟಿದೆ ಅಂತಾ ಒಪ್ಪಿಕೊಳ್ಳಬೇಕು ಈ ಶರ್ತುಗಳ ಬಗ್ಗೆ ಸಂಬಂಧಿಸಿದ ಕಾರ್ಯಾಲಯದ ಮುಖ್ಯಸ್ಥರ ಮುಂದೆ ಒಪ್ಪಿಗೆ ಪತ್ರ ನೀಡುವದು.
3) ಅವರು ಸೇವೆಗೆ ಹಾಜರಾಗುವಾಗ ಜಿಲ್ಲಾ ವೈದ್ಯಾಧಿಕಾರಿಗಳಿಂದ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರಪಡಿಸತಕ್ಕದ್ದು.
4) ಭಾರತೀಯ ಸಂವಿಧಾನಕ್ಕೆ ನಿಷ್ಠಾವಂತನಾಗಿದ್ದೇನೆಂದು ಘೋಷಣಾ ಪತ್ರವನ್ನು ಹಾಜರಪಡಿಸತಕ್ಕದ್ದು,
5) ಕ.ನಾ.ಸೇ. (ಅ.ಪ) ನಿಯಮಗಳು, 1977 ರ ಮೇರೆಗೆ ಅವರ ಸೇವೆಯು ಎರಡು (2) ವರ್ಷಗಳವರೆಗೆ ಅರ್ಹತಾ ಪರಿಕ್ಷಾರ್ಥ ಅವಧಿಗೆ ಒಳಪಟ್ಟಿದೆ. ಸದರ ಅರ್ಹತಾ ಪರಿಕ್ಷಾರ್ಥ ಅವಧಿಯಲ್ಲಿ ನಿಗಧಿಪಡಿಸಿದ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು.

-2-

6) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ-59/ಸೇವನೆ/ 2012 ದಿನಾಂಕ: 06-08-2012 ನೇದ್ದರಲ್ಲಿ ನಿಗಧಿಪಡಿಸಿದಂತೆ ನೌಕರರು ಕಂಪೂಟರ ಸಾಕ್ಷರತಾ ಪರೀಕ್ಷೆಯನ್ನು ಎರಡು ವರ್ಷಗಳ ಅರ್ಹತಾ ಪರೀಕ್ಷಾರ್ಥ ಅವಧಿಯೊಳಗಾಗಿ ಪಾಸು ಮಾಡಿದ ಬಗ್ಗೆ ಪ್ರಮಾಣ ಪತ್ರ ಹಾಜರಪಡಿಸುವದು.

7) ಅವರು ಸೇವೆಗೆ ಹಾಜರಾದ ಒಂದು ತಿಂಗಳೊಳಗಾಗಿ ಅವರು ಹೊಂದಿದ ಚರಾಸ್ತಿ/ಸ್ಥಿರಾಸ್ಥಿಯ ವಿವರಗಳನ್ನು ನಿಗದಿತ ನಮೂನೆಯಲ್ಲಿ ಘೋಷಣೆ ಮಾಡತಕ್ಕದ್ದು.

8) ಅವರು ಸೇವೆಗೆ ಹಾಜರಾಗುವ ಕಾರ್ಯಾಲಯದ ಮುಖ್ಯಸ್ಥರಿಗೆ ಈ ಕೆಳಗೆ ನಮೂದಿಸಿರುವ ಮೂಲ ಪ್ರಮಾಣ ಪತ್ರ ನೀಡುವದು.

   1) ಜನ್ಮ ದಿನಾಂಕದ ಬಗ್ಗೆ ಅಧಿಕೃತ ದಾಖಲೆ.
   2) ಶಿಕ್ಷಣಾರ್ಹತೆಯ ಬಗ್ಗೆ ಮೂಲ ಪ್ರತಿಗಳು.
   3) ಜಾತಿಯ ಪ್ರಮಾಣ ಪತ್ರ (ಪ.ಜಾ.ಮತ್ತು ಪ.ಪಂ. ಇದ್ದರೆ) ಮಾತ್ರ.
   4) ಆದಾಯ ಪ್ರಮಾಣ ಪತ್ರ.

9) ಸದರೀಯವರ ವೇತನ ಶ್ರೇಣಿ ರೂ. 21400 ರಿಂದ 42000/-ರಲ್ಲಿ ವೇತನ ನಿಗದಿಪಡಿಸುವುದು.

10) ಅಭ್ಯರ್ಥಿಯು ಕಡೆಯದಾಗಿ ಹಾಜರಾಗಿದ್ದ ಶಾಲೆಯ ಮುಖ್ಯೋಪಾದ್ಯಾಯರ ನೀಡಿರುವ ನಡತೆ ಪ್ರಮಾಣ ಪತ್ರವನ್ನು ಹಾಗೂ ಅಭ್ಯರ್ಥಿಗಳಿಗೆ ಸಂಬಂಧಿತರಲ್ಲದ ಇಬ್ಬರು ಗಣ್ಯ ವ್ಯಕ್ತಿಗಳು ನಡತೆಯ ಬಗ್ಗೆ ಕೊಟ್ಟ ಪ್ರಮಾಣ ಪತ್ರ ಹಾಜರಾಗುವ ಕಚೇರಿಯ ಮುಖ್ಯಸ್ಥರರ ಮುಂದೆ ಹಾಜರಪಡಿಸತಕ್ಕದ್ದು,

11) ಸದರೀ ನೇಮಕಾತಿ ಆದೇಶ ತಲುಪಿದ 15 ದಿವಸದೊಳಗಾಗಿ ಸೇವೆಗೆ ಹಾಜರಾಗತಕ್ಕದ್ದು.

Patil NK
(ನಿತೇಶ್ ಕೆ. ಪಾಟೀಲ)
ಜಿಲ್ಲಾಧಿಕಾರಿ ಬೆಳಗಾವಿ

<u>ಪ್ರತಿಯನ್ನು ಮಾಹಿತಿ ಕುರಿತು ಆದರತಪೂರ್ವಕವಾಗಿ ಸಾದರಪಡಿಸಲಾಗಿದೆ :</u>

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ, ವಿಧಾನ ಸೌಧ, ಬೆಂಗಳೂರು ಇವರಿಗೆ.
2) ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ: ಬಿ.ಆರ್. ಅಂಬೇಡ್ಕರ ವೀಧಿ, ಬೆಂಗಳೂರು-560001 ಇವರಿಗೆ.
3) ~~ಮಾನ್ಯ ಪ್ರಾದೇಶಿಕ ಆಯುಕ್ತರು ಬೆಳಗಾವಿ ವಿಭಾಗ ಬೆಳಗಾವಿ ಇವರಿಗೆ.~~

<u>ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ :</u>

1) ತಹಶೀಲ್ದಾರ -----ಹುಕ್ಕೇರಿ---------- ಇವರಿಗೆ
2) ಕು. ರುಕ್ಸಾರ ಬಾಬಾಸಾಹೇಬ ಶೇಖ ಮು.ಪೋ. ಸಂಕೇಶ್ವರ, ತಾ: ಹುಕ್ಕೇರಿ ಜಿ: ಬೆಳಗಾವಿ ಇವರಿಗೆ.

ಅಪರ ಜಿಲ್ಲಾಧಿಕಾರಿ ಬೆಳಗಾವಿ

DEPUTY COMMISSIONER
ಡೆಪ್ಯುಟಿ ಕಮೀಶನರ
BELGAUM